ಸೋಮವಾರ, ದಿನಾಂಕ : 28ನೇ ಜುಲೈ, 2003ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ಅವರು
ಪೀಠವನ್ನು ಅಲಂಕರಿಸಿದ್ದರು

1) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ:- ಸಚಿವರುಗಳ ಗೈರು ಹಾಜರಿ

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಕಡೆ ಒಬ್ಬರೇ ಮಂತ್ರಿಗಳಿದ್ದಾರೆ. ನೋಡಿ, ಯಾವ ಪರಿಸ್ಥಿತಿ ನಿಮ್ಮದು! ತಾವು ಯಾವ ತರಹ ಸರ್ಕಾರ ನಡೆಸುತ್ತಿದ್ದೀರೆಂದರೆ ಈ ತರಹ ನಡೆಸುತ್ತಿದ್ದೀರಿ!

ಶ್ರೀ ಎಸ್.ಎಸ್. ಪಾಟೀಲ್:- ಬ್ಯಾಡಗಿಯಲ್ಲಿ ರೈತರು ಸಾಯುತ್ತಿದ್ದಾರೆ. 'ಸಾಮೂಹಿಕವಾಗಿ ನಾವುಗಳೆಲ್ಲರೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ' ಎಂದು ರೈತರು ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು):- ಶ್ರೀನಿವಾಸಗೌಡರೆ, ಈಗ ಮೂರು ಜನ ಸಚಿವರು ಇದ್ದೇವಲ್ಲಾ ಇತರ ಸಚಿವರು ಈಗ ಒಳಗಡೆ ಬರುತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಮಾತನಾಡುವಾಗ ಸರ್ಕಾರದ ಕುರಿತು ದಪ್ಪ ಚರ್ಮವೆಂದು ಹೇಳಿದೆ. ಪಾಪ! ಅದು ತಮಗೆ ಅನ್ವಯಿಸಿದ್ದೆಂದು ತೋಟಗಾರಿಕೆ ಸಚಿವರು ತಪ್ಪು ತಿಳಿದುಕೊಂಡರು. ನಾನು ಇದನ್ನೇ ದಪ್ಪ ಚರ್ಮವೆಂದು ಹೇಳುವುದು. ನಾವು ಎಷ್ಟೋ ಸಲ ಪ್ರಸ್ತಾಪ ಮಾಡುತ್ತಿರುತ್ತೇವೆ. ಸರ್ಕಾರಕ್ಕೆ ಸೂಕ್ಷ್ಮತೆ ಇಲ್ಲವೆಂದರೆ, ಸದನದಲ್ಲಿ ಡಿಮ್ಯಾಂಡ್ಸ್ ಮೇಲೆ ಚರ್ಚೆ ನಡೆಯುತ್ತಿದೆ. 27 ಇಲಾಖೆಗಳನ್ನು ತೆಗೆದುಕೊಂಡಿದ್ದೀರಿ. ಸದನದಲ್ಲಿ ಮುಂದಿನ ಸಾಲಿನ ಮಂತ್ರಿಗಳೂ ಇಲ್ಲ, ಹಿಂದಿನ ಸಾಲಿನ ಮಂತ್ರಿಗಳೂ ಇಲ್ಲ.

ಅಧ್ಯಕ್ಷರು:- ಈಗ ಎಲ್ಲರೂ ಸಾಲಾಗಿ ಒಳಗಡೆ ಬರುತ್ತಿದ್ದಾರೆ, ನೋಡಿ.

ಶ್ರೀ ಬಿ. ಸೋಮಶೇಖರ್:- ಸದನಕ್ಕೆ ಮಾನ್ಯ ಅಧ್ಯಕ್ಷರು ಬಂದಾಗ ಅವರು ಇರಬೇಕಲ್ಲಾ ನಿಮಗೋಸ್ಕರ ಕಾಯಬೇಕಿತ್ತೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಅಧ್ಯಕ್ಷರೆ, ಅವರು ಇಲ್ಲಿಗೆ ಬರುವುದಕ್ಕಿಂತ ಮುಂಚಿತವಾಗಿಯೇ ನಾವು ಬಂದು ಹೋಗಿದ್ದೆವು.

ಶ್ರೀ ಬಿ. ಸೋಮಶೇಖರ್:- ಬಂದು ಹೋಗಿದ್ದೆವು ಎಂದರೆ ಸದನ ಶುರುವಾದಾಗ ಇರಬೇಕಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ:- ನೀವೇ ಬಂದಿಲ್ಲ, ನಾವೇನು ಮಾಡೋಣ? ವಿರೋಧ ಪಕ್ಷದವರೂ ಬೇಕಲ್ಲಾ

(ಆ) ವಿಷಯ:- ಬ್ಯಾಡಗಿಯಲ್ಲಿ ರೈತರು ತಹಸೀಲ್ದಾರ್ ಕಛೇರಿ ಮುಂದೆ ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ):- ರಾಜ್ಯದ ಬ್ಯಾಡಗಿಯಲ್ಲಿ ತಹಸೀಲ್ದಾರ್ ಕಚೇರಿ ಮುಂದೆ ಸುಮಾರು 51 ಜನ ರೈತರು ನೇಣು ಹಾಕಿಕೊಂಡು ಸಾಮೂಹಿಕವಾಗಿ ಆತ್ಮಹತ್ಯೆ

ಮಾಡಿಕೊಳ್ಳುವುದಾಗಿ ಸರ್ಕಾರಕ್ಕೆ ಈಗಾಗಲೇ ನೋಟೀಸ್ ಕಳುಹಿಸಿಕೊಟ್ಟಿದ್ದರೂ ಅದರ ಬಗ್ಗೆ ಸರ್ಕಾರದ ಸ್ಪಂದನ ಏನೇನೂ ಇಲ್ಲ. ನೇಣು ಹಾಕಿಕೊಂಡು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳಲು ನೂರಾರು ರೈತರು ಸಾಲುಗಟ್ಟಿ ನಿಂತಿದ್ದಾರೆ!

ಅಧ್ಯಕ್ಷರು:– ಮೆತ್ತಗೆ ಮಾತನಾಡಿ, ಸ್ವಲ್ಪ ಸಾವಧಾನವಾಗಿ ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್:– ಇದು ಮೆತ್ತಗೆ ಮಾತನಾಡುವ ವಿಚಾರವಲ್ಲ.ಇದು ಗಾಬರಿಯಾಗುವ ವಿಚಾರ.

ಅಧ್ಯಕ್ಷರು:– ತಮ್ಮ ಆತಂಕವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ.

ಶ್ರೀ ಡಿ.ಬಿ.ಚಂದ್ರೆಗೌಡ; (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಗಾಬರಿ ವಿಚಾರ ಪ್ರಸ್ತಾಪ ಮಾಡುವುದಕ್ಕೂ ತಮಗೆ ನೋಟೀಸ್ ಕೊಡಬೇಕು.

ಅಧ್ಯಕ್ಷರು:– ನೋಟೀಸ್ ಕೊಟ್ಟಿದ್ದಾರೆ. ಕೊಟ್ಟು ಎರಡು ದಿವಸಗಳಾಯಿತು.

ಶ್ರೀ ಡಿ.ಬಿ.ಚಂದ್ರೇಗೌಡ:– ನಮಗೆ ಅದರ ಪ್ರತಿ ಬಂದಿಲ್ಲ

ಶ್ರೀ ಎಸ್.ಎಸ್. ಪಾಟೀಲ್:– ಅವರು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಬರೆದಿಲ್ಲವೆಂದು ಹೇಳಲಿ? ರಾಜ್ಯಪಾಲರಿಗೂ ಬರೆದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:– ಹಿಂದಿಲ್ಲ, ಮುಂದಿಲ್ಲ, ಸುಮ್ಮನೆ ಹೇಳುತ್ತಾ ಹೋದರೆ ಏನರ್ಥ? ನೋಟೀಸ್ ತಲುಪಲಿ, ವಿಚಾರವೇನೆಂದು ಹೇಳುತ್ತೇವೆ. ನಮಗೆ ನೋಟೀಸ್ ಬರಬೇಕಲ್ಲ.

ಅಧ್ಯಕ್ಷರು:– ನೋಟೀಸ್ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್:– ರೈತರು ಸರ್ಕಾರಕ್ಕೆ ನೋಟೀಸ್ ಕೊಟ್ಟರೆ ನಿಮಗೇನು ಚಿಂತೆ? ಅದನ್ನು ವಿರೋಧ ಪಕ್ಷದವರಾದ ನಾವೇಕೆ ಹೇಳಬೇಕು? ಸರ್ಕಾರ ಈ ನಿಟ್ಟಿನಲ್ಲಿ ಏನು ಮಾಡಿದೆಯೆಂದು ಹೇಳಬೇಕಾಗುತ್ತದೆ. ಸರ್ಕಾರಕ್ಕೆ ಅವರು ನೋಟೀಸ್ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಬ್ಯಾಡಗಿಗೆ ಹೋಗಿದ್ದೆ. ಇಡೀ ಹಾವೇರಿ ಜಿಲ್ಲೆಯ ರೈತರ ಇನ್‌ಶ್ಯೂರೆನ್ಸ್ ಹಣ ತುಂಬಿಲ್ಲ, ಬಡ್ಡಿ ಮನ್ನಾ ಹಣ ತುಂಬಿಲ್ಲವೆಂದು ರೈತರೆಲ್ಲರೂ ತಹಶೀಲ್ದಾರ್ ಕಚೇರಿ ಮುಂದೆ ಸತ್ಯಾಗ್ರಹ ಕುಳಿತಿದ್ದಾರೆ. ಒಂದನೇ ತಾರೀಖಿನೊಳಗೆ ಇನ್‌ಶ್ಯೂರೆನ್ಸ್ ಹಣ ತುಂಬಿಲ್ಲವೆಂದರೆ ನಾವುಗಳೆಲ್ಲರೂ ನೇಣು ಹಾಕಿಕೊಂಡು ಸಾಮೂಹಿಕವಾಗಿ ತಹಶೀಲ್ದಾರ್ ಕಚೇರಿ ಮುಂದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಸುಮಾರು 51 ಜನ ರೈತರು ಸಹಿ ಮಾಡಿರುವ ನೋಟೀಸ್ ಅನ್ನು ಮುಖ್ಯಮಂತ್ರಿಗಳಾದ ಕೃಷ್ಣರವರಿಗೆ ಕಳುಹಿಸಿಕೊಟ್ಟಿದ್ದಾರೆ. ರೈತರುಗಳು ಸಾಯುವುದಕ್ಕೆ ಸಾಲುಗಟ್ಟಿ ನಿಂತಿದ್ದಾರೆ! ಇದು ಇರುವಂಥ ಪರಿಸ್ಥಿತಿ. ನೀವು ಈ ಹಿಂದೆ ಹೀಗೆಯೇ ಮಾಡಿದ್ದರಿಂದ ಮಂಡ್ಯದಲ್ಲಿ ರೈತನೊಬ್ಬ ಸತ್ತ. ಕಾಗೋಡು ತಿಮ್ಮಪ್ಪನವರಿಗೆ ನಗು ಬರುತ್ತದೆ. ಅವರಿಗೆ ಇದನ್ನು ಕೇಳಿಯೂ ನಗು ಹೇಗೆ ಬರುತ್ತದೋ ನಮಗರ್ಥವಾಗುವುದಿಲ್ಲ. ಸರ್ಕಾರಕ್ಕೆ ನೋಟೀಸ್ ಬಂದಿಲ್ಲವೆಂದು ಹೇಳಲಿ? ಅಧ್ಯಕ್ಷರೆ, ತಮಗೆ ನೋಟೀಸನ್ನು ಕಳುಹಿಸಿಕೊಡುತ್ತಿದ್ದೇನೆ. ತಾವು ಅದನ್ನು ನೋಡಿದರೆ ಗಾಬರಿಯಾಗುತ್ತೀರಿ. ಸಾಯಲು ನಾಮುಂದು ತಾಮುಂದು ಎಂದು ರೈತರು ಸಾಲುಗಟ್ಟಿ ನಿಂತಿದ್ದಾರೆ! ಇದು ನಗುವಂಥ ಮಾತಲ್ಲ. ರಾಜ್ಯದಲ್ಲಿ ರೈತರ ಪರಿಸ್ಥಿತಿ ತುಂಬಾ ಕಷ್ಟವಿದೆ. ಈ ನಿಟ್ಟಿನಲ್ಲಿ ನೀವೇನು ಮಾಡಿದ್ದೀರಿ? ಸರ್ಕಾರದವರು ಈ ಬಗ್ಗೆ ಹೇಳಿಕೆ ನೀಡಬೇಕು. ರೈತರಿಗೆ ಅಲ್ಲಿ ಎಷ್ಟು ತೊಂದರೆಯಾಗಿದೆಯೆಂದರೆ, ಅವರ ಇನ್‌ಶ್ಯೂರೆನ್ಸ್ ಹಣ ತುಂಬಿಲ್ಲ. ಮಳೆಯಾದರೆ ಬಿತ್ತಲು ಏನೂ ಇಲ್ಲ, ಬಡ್ಡಿ ಮನ್ನಾ ಹಣ ತುಂಬಲಿಲ್ಲ, ಬರಗಾಲ ಕಾಮಗಾರಿ ಇಲ್ಲ, ರೈತರ ದನಕರುಗಳಿಗೆ

ಮೇವಿಲ್ಲ. ಸುಮಾರು 51 ಜನ ರೈತರು ಕಳುಹಿಸಿರುವ ನೋಟೀಸ್ ಮುಖ್ಯಮಂತ್ರಿಗಳಾಗ ಕೃಷ್ಣ, ರಾಜ್ಯಪಾಲುರ ಹೀಗೆ ಸಂಬಂಧಪಟ್ಟ ಎಲ್ಲರಿಗೂ ಹೋಗಿದೆ. ನಾವುಗಳೆಲ್ಲರೂ ನೇಣು ಹಾಕಿಕೊಂಡು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಹೇಳಿರುವುದು ಹುಡುಗಾಟದ ಮಾತಲ್ಲ. ರೈತರು ಈ ರೀತಿ ಸಾಮೂಹಿಕವಾಗಿ ನೇಣು ಹಾಕಿಕೊಂಡು ಸತ್ತರೆ ರಾಜ್ಯದಲ್ಲಿ ನಾಳಿನ ಪರಿಸ್ಥಿತಿ ಏನಾಗುತ್ತದೆಂದು ತಿಳಿದುಕೊಳ್ಳಿ. ಅವರು ನಗುತ್ತಿದ್ದಾರೆ. ತಿಮ್ಮಪ್ಪನವರೆ, ಸರ್ಕಾರಕ್ಕೆ ರೈತರು ನೋಟೀಸ್ ಕೊಟ್ಟಿರುವುದಕ್ಕೆ ತಾವೇನು ಮಾಡಿದ್ದೀರಿ? ಉತ್ತರ ಕೊಡಿ.

ಶ್ರೀ ಕೆ. ಬಿ. ಮಲ್ಲಿಕಾರ್ಜುನ್:– ನಾನು ಮಾನ್ಯ ಹಿರಿಯ ಸದಸ್ಯರಾದ ಪಾಟೀಲ್‌ರವರಿಗೆ ಹೇಳುವುದೇನೆಂದರೆ, ನೇಣು ಹಾಕಿಕೊಂಡಾಗಲೇ ಅವರು ಏನೂ ಮಾಡಲಿಲ್ಲ. ಇನ್ನು ನೇಣು ಹಾಕಿಕೊಳ್ಳುತ್ತಾರೆಂದರೆ ಅವರೇಕೆ ತಲೆ ಕೆಡಿಸಿಕೊಳ್ಳುತ್ತಾರೆ?

ಶ್ರೀ ಎಸ್.ಎಸ್. ಪಾಟೀಲ್:– ತಹಶೀಲ್ದಾರ್ ಕಚೇರಿ ಮುಂದೆ ಸತ್ಯಾಗ್ರಹ ಮಾಡುತ್ತಿದ್ದ ರೈತರ ಬಳಿಗೆ ಹೋಗಿ ಕೈಮುಗಿದು ಕೇಳಿಕೊಂಡೆ. ದಯವಿಟ್ಟು ಆ ರೀತಿ ಮಾಡಬೇಡಿ. ಅಸೆಂಬ್ಲಿಯಲ್ಲಿ ಈ ಕುರಿತು ವಿಚಾರ ಪ್ರಸ್ತಾಪ ಮಾಡುತ್ತೇವೆ. ಈ ರೀತಿ ನೀವು ಮಾಡುವುದು ಸರಿಯಲ್ಲವೆಂದು ಏನೇ ಹೇಳಿದರೂ ಕೂಡ ಒಪ್ಪಲು ಅವರು ತಯಾರಿಲ್ಲ. ಸಾಯಲು ನೂರಾರು ರೈತರು ತಯಾರಾಗಿದ್ದಾರೆ! "ಸರ್ಕಾರ ಕಣ್ಣು ತೆರೆಯುವುದಿಲ್ಲ, ಇರುವುದಕ್ಕಿಂತ ಸಾಯುವುದೇ ಲೇಸು. ನಮಗೆ ಊಟವಿಲ್ಲ, ದನಕರುಗಳಿಗೆ ಮೇವಿಲ್ಲ, ಇನ್‌ಶ್ಯೂರೆನ್ಸ್ ಸಹ ತುಂಬುವುದಿಲ್ಲ, ನಾವೇನು ಮಾಡಬೇಕು? ಹಾಗಾಗಿ ಇರುವುದಕ್ಕಿಂತಲೂ ಸಾಯುವುದೇ ಲೇಸೆಂಬ ತೀರ್ಮಾನಕ್ಕೆ ಬಂದಿದ್ದೇವೆ" ಎಂದು ಹೇಳುತ್ತಾರೆ. ರಾಜ್ಯದಲ್ಲಿ ರೈತರ್ಯಾರೂ ಉಳಿಯುವುದಿಲ್ಲವೆಂಬ ತೀರ್ಮಾನಕ್ಕೆ ಅವರು ಬಂದಿದ್ದಾರೆ. ಇದಕ್ಕೆ ಉತ್ತರ ಹೇಳಬೇಕು.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನೇಣು ಹಾಕಿಕೊಂಡು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ರೈತರು ಮುಖ್ಯಮಂತ್ರಿಗಳಿಗೆ ನೋಟೀಸ್ ಕಳುಹಿಸಿಕೊಟ್ಟಿದ್ದಾರೆಂದು ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲ್‌ರವರು ಏನು ಹೇಳಿದ್ದಾರೆ. ನೋಟೀಸಿನ ಒಂದು ಪ್ರತಿಯನ್ನು ನನಗೂ ಕಳುಹಿಸಿಕೊಟ್ಟಿದ್ದಾರೆ. ಅದನ್ನು ತುರ್ತಾಗಿ ನಾನು ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಇದು ಗಂಭೀರವಾದ ಸಮಸ್ಯೆ. ಏಕೆಂದರೆ, ಎಲ್ಲೋ ಒಂದು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಸರ್ಕಾರ ನಿರ್ಬಂಧ ಹೇರುವ ಕೆಲಸ ಮಾಡಿದೆ. 51 ಜನ ರೈತರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಹೇಳಿರುವುದಕ್ಕೆ ಕೆಲವು ಪ್ರಮುಖ ಕಾರಣಗಳಿರಬಹುದು. ಬೆಳೆ ವಿಮೆ ಇರಬಹುದು, ಬಡ್ಡಿ ಮನ್ನಾ ಇರಬಹುದು, ಇನ್ನಿತರ ಹಲವಾರು ಸಮಸ್ಯೆಗಳಿರಬಹುದು. ಇದನ್ನೆಲ್ಲಾ ಅವರು ಬರೆದು 31ನೇ ತಾರೀಖಿನೊಳಗೆ ನಡೆಸಿಕೊಡದಿದ್ದರೆ ನಾವುಗಳೆಲ್ಲರೂ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಮುಖ್ಯಮಂತ್ರಿಗಳಿಗೆ ನೋಟೀಸ್ ಕಳುಹಿಸಿದ್ದಾರೆ. ಇದಕ್ಕೆ ಸರ್ಕಾರದ ಯಾವುದೇ ಸ್ಪಂದನವಿಲ್ಲ. ಬೆಳೆ ವಿಮೆ ಪ್ರೀಮಿಯಂ ತುಂಬುವ ಅವಧಿ 31ನೇ ತಾರೀಖಿಗೆ ಮುಕ್ತಾಯಗೊಳ್ಳುತ್ತದೆ. ಸದನಕ್ಕೆ ಕೃಷಿ ಸಚಿವರಾದ ಕೌಜಲಗಿಯವರು ಬರಬೇಕಾಗಿತ್ತು, ಬಂದಿಲ್ಲ. ರೈತರು ಪ್ರೀಮಿಯಂ ಹಣ ತುಂಬಿಲ್ಲ. ಅದಕ್ಕೆ ಕಾರಣವಿದೆ. ಇವೊತ್ತು ತಹಶೀಲ್ದಾರ್ ಕಚೇರಿಗೆ ಹೋದರೆ ಕಂಪ್ಯೂಟರೈಸ್ಡ್ ಉತಾರ ಸಿಗುತ್ತಿಲ್ಲ. ಕಂಪ್ಯೂಟರೈಸ್ಡ್ ಉತಾರ ತೆಗೆದುಕೊಂಡು ಬಂದರೆ ಮಾತ್ರ ಬೆಳೆ ವಿಮೆ ಹಣವನ್ನು ತುಂಬಲು ನಾವು ಅವಕಾಶ ಮಾಡಿಕೊಡುತ್ತೇವೆಂದು ಇನ್‌ಶ್ಯೂರೆನ್ಸ್ ಕಂಪನಿ ಮತ್ತು ಬ್ಯಾಂಕ್‌ನವರು

ರೈತರಿಗೆ ಹೇಳುತ್ತಿದ್ದಾರೆ. ಆದರೆ, ಕಂಪ್ಯೂಟರೈಸ್ಡ್ ಉತಾರ ಸಿಗುತ್ತಿಲ್ಲ. ನೂರೆಂಟು ಕಾರಣಗಳಿಂದ ಇವೊತ್ತು ಬೆಳೆ ವಿಮೆಯ ಪ್ರೀಮಿಯಂ ಹಣವನ್ನು ತುಂಬುವುದಕ್ಕಾಗುತ್ತಿಲ್ಲ. ಅದಕ್ಕೋಸ್ಕರ ತಕ್ಷಣ ಒಂದು ತಿಂಗಳ ಅವಧಿಯನ್ನು ವಿಸ್ತರಿಸುವುದಕ್ಕೆ ಮನವಿ ಮಾಡಿಕೊಳ್ಳಬೇಕೆಂದು ಮೊನ್ನೆ ಕೃಷಿ ಸಚಿವರಿಗೆ ಒತ್ತಾಯ ಮಾಡಿದೆ. ಆದರೆ, ಇದುವರೆವಿಗೂ ಸರ್ಕಾರದಿಂದ ಮನವಿ ಆಗಿಲ್ಲ. ಹೀಗಾಗಿ ರೈತರು ಈ ರೀತಿಯ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಬೆಳೆ ವಿಮೆ ಹಣ ಬಿಡುಗಡೆಯಾಗಿಲ್ಲ. ಬಡ್ಡಿ ಮನ್ನಾ ಹಣವನ್ನು ಈ ತಿಂಗಳೊಳಗೆ ತುಂಬುತ್ತೇವೆಂದು ಹೇಳಿದ್ದರು, ಅದರ ಬಗ್ಗೆ ಏನಾಯಿತು? ಏನೂ ಆಗಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಮುನ್ನೂರಕ್ಕೂ ಹೆಚ್ಚು ರೈತರು ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಿಗೆ ಪರಿಹಾರ ಒದಗಿಸಿಕೊಡುವುದಕ್ಕೆ ನಿಮ್ಮಿಂದ ಆಗಲಿಲ್ಲ. ಆ ಕುರಿತು ಎನ್‌ಕ್ವೇರಿ ಮಾಡಲಿಲ್ಲ.ಇವೊತ್ತು ಸಾಮೂಹಿಕವಾಗಿ ರೈತರೆಲ್ಲರೂ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದರೂ ಇದುವರೆವಿಗೂ ಡಿ.ಸಿ.ಯಾಗಲಿ, ತಹಶೀಲ್ದಾರ್ ಆಗಲಿ ಎನ್‌ಕ್ವೇರಿ ಮಾಡಿಲ್ಲ. ಸರ್ಕಾರ ರೈತರ ಸಮಸ್ಯೆಗೆ ಸ್ಪಂದಿಸದಿದ್ದರೆ ನಾಳೆ ಪರಿಸ್ಥಿತಿ ಗಂಭೀರವಾಗುತ್ತದೆ. ಆದಕಾರಣ, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್:– ರೊಕ್ಕ ತುಂಬಲೇಬೇಕು. ರೊಕ್ಕ ತುಂಬುವ ಬಗ್ಗೆ ರೈತರಿಗೆ ಆಶ್ವಾಸನೆ ನೀಡದಿದ್ದರೆ ಅವರೆಲ್ಲರೂ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಂತೂ ನಿಶ್ಚಿತ. ನಾನು ಕೈಮುಗಿದೆ. ನೀವು ಈ ರೀತಿ ಮಾಡಬೇಡಿ, ಇದು ಸರಿಯಿಲ್ಲ. ಈ ಬಗ್ಗೆ ನಾವು ಅಸೆಂಬ್ಲಿಯಲ್ಲಿ ಹೋರಾಟ ಮಾಡುತ್ತೇವೆ, ಸತ್ಯಾಗ್ರಹ ಮಾಡುತ್ತೇವೆ. ದಯವಿಟ್ಟು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನ ಮಾಡಬೇಡಿರೆಂದರೂ ಕೇಳುತ್ತಿಲ್ಲ. ಇದು ಹುಡುಗಾಟಿಕೆಯಲ್ಲ. ಇದನ್ನು ತಾವು ಗಂಭೀರವಾಗಿ ತೆಗೆದುಕೊಂಡಂತೆ ಕಾಣುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ಯಾವ ಸರ್ಕಾರವೂ ಹುಡುಗಾಟಿಕೆ ಮಾಡುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:– 31ನೇ ತಾರೀಖಿನವರೆಗೆ ಅವರು ಸಮಯ ಕೊಟ್ಟಿದ್ದಾರೆ. 1ನೇ ತಾರೀಖಿನಂದು ಅವರೆಲ್ಲರೂ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಶ್ರೀ ಸಿ.ಚನ್ನಿಗಪ್ಪ:– ಅಧ್ಯಕ್ಷರೆ, ಪಿಎಲ್‌ಡಿ ಬ್ಯಾಂಕ್ ಸಾಲವನ್ನು ನಾವು ವಸೂಲು ಮಾಡುವುದಿಲ್ಲ. ಬಡ್ಡಿ ಮನ್ನಾ ಮಾಡುತ್ತೇವೆಂದು ಮೂರು ದಿವಸಗಳ ಮುಂಚೆ ಸರ್ಕಾರ ಉತ್ತರ ಕೊಟ್ಟಿದೆ. ಆದರೆ, ನಿನ್ನೆ ದಿವಸ ತ್ಯಾಮಗೊಂಡ್ಲು ಹೋಬಳಿ ಕೂಡಿಗೆಹಳ್ಳಿಯ ಚಿಕ್ಕಣ ಎಂಬುವರ ಟ್ರ್ಯಾಕ್ಟರ್ ಅನ್ನು ಸೀಜ್ ಮಾಡಿಕೊಂಡು ಹೋಗಿದ್ದಾರೆ. ಶನಿವಾರ ದಿವಸ ಪಿಎಲ್‌ಡಿ ಬ್ಯಾಂಕ್ ಮುಂದೆ ಅದನ್ನು ನಿಲ್ಲಿಸಿದ್ದಾರೆ. ಇದರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಚಂದ್ರೇಗೌಡರು ಉತ್ತರ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಡಿ. ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಇವರು ಪ್ರಸ್ತಾಪಿಸಿರುವ ಪ್ರಶ್ನೆ ಕುರಿತು ನಮಗೆ ಯಾವುದೇ ನೋಟೀಸ್ ಕೊಟ್ಟಿಲ್ಲ. ಸರ್ಕಾರವೆಂದರೆ ಎಸ್.ಎಸ್.ಪಾಟೀಲರು ಹೇಳುವುದು, ಅದಕ್ಕೆ ಚಂದ್ರೇಗೌಡರು ಉತ್ತರಿಸುವುದು ಆಗುವುದಿಲ್ಲ. ಗೌರವಾನ್ವಿತ ಸದಸ್ಯರು ಪ್ರಸ್ತಾಪಿಸಿರುವ ಪ್ರಶ್ನೆಗೆ ತಮ್ಮ ಮೂಲಕ ನಮಗೆ ಒಂದು ನೋಟೀಸ್‌ನ ಪ್ರತಿ ಬರಬೇಕು. ಮುಖ್ಯಮಂತ್ರಿಗಳಿಗೆ ಬರೆದ ಪತ್ರವನ್ನು ಈಗ ಕಳುಹಿಸಿಕೊಟ್ಟಿದ್ದಾರೆ. ಅಧ್ಯಕ್ಷರಿಗೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಯಾವುದಾದರೂ ವಿಚಾರ ಹೇಳುವಾಗ, ಸದನದಲ್ಲಿ ಹೇಳಿದರೆ ಅದಕ್ಕೆ ಮಾನ್ಯತೆ, ಗೌರವ ಹಾಗೂ ಘನತೆ ಬರಬೇಕು. ಸರ್ಕಾರ ತನ್ನ ಅಭಿಪ್ರಾಯ ತಿಳಿಸುವಾಗ ತನ್ನ

ಪರಿಸ್ಥಿತಿಯನ್ನೂ ಸಹ ಗಮನದಲ್ಲಿಟ್ಟುಕೊಂಡು ಹೇಳಬೇಕಾಗುತ್ತದೆ. ಈಗ ತಾನೇ ನೋಟೀಸ್ ಕೊಟ್ಟಿದ್ದಾರೆ. ವಿಚಾರವೇನೆಂದರೆ, ಬೆಳೆ ವಿಮೆ ಹಣವನ್ನು ಸರ್ಕಾರ ತುಂಬಿಲ್ಲ ಎನ್ನುವುದಕ್ಕಷ್ಟೇ ಸೀಮಿತವಾಗಿದೆ. ಇದರ ಹೊರತಾಗಿ ಬಡ್ಡಿ ಮನ್ನಾ ಮಾಡಿಲ್ಲ, ಸಾಲ ಕೊಟ್ಟಿಲ್ಲ ಮುಂತಾದ ಸಾಕಷ್ಟು ವಿಚಾರಗಳನ್ನು ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದ್ದಾರೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಆದರೆ ಈ ವಿಚಾರದಲ್ಲಿ ನನಗೆ ನೆನಪಿರುವಂತೆ, ನಾವೂ ಅವರೂ ಒಟ್ಟಿಗೆ ಕುಳಿತು ಮಾತನಾಡುವಾಗ, ನಮ್ಮ ಮತ್ತು ಪ್ರತಿಪಕ್ಷಗಳ ಮಧ್ಯೆ ಬಹಳ ಜಟಿಲವಾದಂಥ ಸಮಸ್ಯೆಗಳನ್ನು ಪರಿಹಾರ ಮಾಡುವ ಬಗ್ಗೆ ಬಂದಾಗ, ಇದೂ ಒಂದು ವಿಚಾರವನ್ನು ಚರ್ಚೆ ಮಾಡಿದ್ದೇವೆ. ಆ ರೀತಿ ಸುಧೀರ್ಘವಾಗಿ ನಾವು ಚರ್ಚೆ ಮಾಡಿದಾಗ ನಮಗೆ ಇರತಕ್ಕ ಮಾಹಿತಿಯ ಪ್ರಕಾರ ಸುಮಾರು 330 ಕೋಟಿ ರೂಪಾಯಿಗಳ ವರೆಗೆ ಇನ್‌ಶ್ಯೂರೆನ್ಸ್ ಕ್ಲೇಮ್ಸ್ ಇದ್ದಾವೆ, ಇದರಲ್ಲಿ ಅರ್ಧ ಭಾಗವನ್ನು ರಾಜ್ಯ ಸರ್ಕಾರ ತುಂಬಬೇಕು, ಅರ್ಧ ಭಾಗವನ್ನು ಕೇಂದ್ರ ಸರ್ಕಾರ ತುಂಬ ಬೇಕಾಗುತ್ತದೆ. ಜೊತೆಗೆ ಇನ್‌ಶ್ಯೂರೆನ್ಸ್ ಕಂಪನಿಯವರು ಇದರಲ್ಲಿ ಶೇಕಡ 40 ರಷ್ಟು ಬೋಗಸ್ ಕ್ರೈಮ್ಸ್ ಇದೆ ಎಂದು ಅವರೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ತೋರಿಸುತ್ತೇವೆಂದು ಹೇಳಿದ್ದೇವೆ, ಯಾವುದನ್ನೂ ಸರ್ಕಾರ ಮುಚ್ಚಿಟ್ಟಿಲ್ಲ, ಎಲ್ಲಾ ಪಾರದರ್ಶಕವಾಗಿದೆ, ಇದರ ಜೊತೆಗೆ ಸರ್ಕಾರ ಈಗಾಗಲೆ 13 ಕೋಟಿ ಇದಕ್ಕಾಗಿ ತುಂಬಿದೆ, ಇನ್ನೂ 13–14 ಕೋಟಿ ರೂಪಾಯಿಗಳನ್ನು ಈ ತಿಂಗಳ ಕೊನೆಯೊಳಗೆ ತುಂಬುತ್ತೇವೆಂದು ಹೇಳಿದ್ದೇವೆ, ತುಂಬಿದರೂ ಎನ್‌ಕ್ಯಾಶ್ ಮಾಡಿಕೊಳ್ಳಲು ಇರತಕ್ಕ ತೊಂದರೆಗಳ ಬಗ್ಗೆ ತಮ್ಮ ಮೂಲಕ ಸದನದ ಗಮನಕ್ಕೆ, ಗೌರವಾನ್ವಿತ ಹಿರಿಯ ಸದಸ್ಯರುಗಳ ಗಮನಕ್ಕೆ ತರುತ್ತೇನೆ. ಆದರೆ, ಈಗ ತಂದಿರತಕ್ಕ ನೋಟೀಸು, ಈಗ ತಾನೇ ರೈತರು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಟ್ಟಿರುವ ನೋಟೀಸ್ ಕಾಪಿಯನ್ನು ಕೊಟ್ಟಿದ್ದಾರೆ, ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ, ಸಾಧ್ಯವಾದರೆ ಇಂದು ಇಲ್ಲವೆ ನಾಳೆ ದಿವಸ ಉತ್ತರವನ್ನು ಹೇಳಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:– ಇದರ ಬಗ್ಗೆ ಅವರದ್ದು ಅಷ್ಟೂನೂ ಸೀರಿಯಸ್‌ನೆಸ್ ಕಾಣಲಿಲ್ಲ.

ಶ್ರೀ ಜಗದೀಶ್‌ಶೆಟ್ಟರ್:– ನಲವತ್ತು ಪರ್‌ಸೆಂಟ್ ಬೋಗಸ್ ಎಂದು ಹೇಳಿದ್ದಾರೆ, ಯಾವುದು ಜೆನ್ಯುಇನ್ ಇದೆ?

ಶ್ರೀ ಡಿ. ಬಿ. ಚಂದ್ರೇಗೌಡ: ಅದು ನನಗೆ ಗೊತ್ತಿಲ್ಲ, ಇನ್‌ಶ್ಯೂರೆನ್ಸ್ ಕಂಪನಿಯವರು ಹಾಗೆ ಬರೆದಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಯವರಿಗೆ ಕಾಗದ ಬರೆದಿದ್ದಾರೆ.

ಮಾನ್ಯ ಸದಸ್ಯರೊಬ್ಬರು:– ಬೋಗಸ್ ಮಾಡಿರುವ ಅಧಿಕಾರಿಗಳ ಮೇಲೂ ಕ್ರಮ ತೆಗೆದುಕೊಳ್ಳಿ.

ಶ್ರೀ ಜಗದೀಶ್‌ಶೆಟ್ಟರ್:– ಯಾವುದು ಜೆನ್ಯುಇನ್ ಇದೆ ಅದನ್ನಾದರೂ ಕ್ಲಿಯರ್ ಮಾಡಿ.

ಅಧ್ಯಕ್ಷರು:– ನಾಳೆ ಇಲ್ಲವೆ ನಾಡಿದ್ದು ಉತ್ತರವನ್ನು ಹೇಳುತ್ತೇವೆಂದು ಹೇಳುತ್ತಿದ್ದಾರಲ್ಲಾ?

ಶ್ರೀ ಡಿ. ಬಿ.ಚಂದ್ರೇಗೌಡ:– ಎಲ್ಲಿ ನ್ಯಾಯವಾಗಿ ಕೊಡಬೇಕಾಗಿದ್ದಂಥ ಹಣವೇನಿದೆ ಅಲ್ಲಿ ಏನೂ ತೊಂದರೆ ಇಲ್ಲ, ತೊಂದರೆ ಎಲ್ಲಿ ಬಂದಿದೆಯೆಂದರೆ, ಅರ್ಹತೆ ಇಲ್ಲದೆಯೇ ಕೇಳಿರತಕ್ಕಂಥ ಕ್ರೇಮ್ಸ್‌ನ್ನು ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಜಗದೀಶ್‌ಶೆಟ್ಟರ್:– ತಾವು 40 ಪರ್‌ಸೆಂಟ್ ಅರ್ಹತೆ ಇಲ್ಲವೆಂದು ಹೇಳುತ್ತಿದ್ದೀರಿ,..

ಶ್ರೀ ಡಿ. ಬಿ.ಚಂದ್ರೇಗೌಡ:– ನಾನು ಹೇಳಲಿಲ್ಲ, ಇನ್‌ಶ್ಯೂರೆನ್ಸ್ ಕಂಪನಿಯವರು ಹೇಳುತ್ತಾರೆ.

ಶ್ರೀ ಜಗದೀಶ್‌ಶೆಟ್ಟರ್:– ಅರ್ಹತೆ ಇರುವವರಿಗೆ ತಕ್ಷಣವೇ ಬಿಡುಗಡೆ ಮಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ:– ನಾನು ಹೇಳುವುಕ್ಕೆ ಹೋಗಿಲ್ಲ, ಸರ್ಕಾರದ ನಿಲವೂ ಅಲ್ಲ, ಇನ್‌ಶ್ಯೂರೆನ್ಸ್ ಕಂಪನಿಯವರು ಈ ರೀತಿ ಮಾಹಿತಿಯನ್ನು ನಮಗೆ ಒದಗಿಸಿಕೊಡಿ ಎಂದು ಹೇಳಿದ್ದಾರೆ, ಬಂದ ತಕ್ಷಣ ಒದಗಿಸಿಕೊಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್:– ತಾವು ನನ್ನನ್ನು ಗೌರವಯುತವಾಗಿ ಸಹಕಾರ ಇಲಾಖೆಯ ವಿಷಯ ಸಮಿತಿಗೆ ಅಧ್ಯಕ್ಷನನ್ನಾಗಿ ಮಾಡಿದ್ದೀರಿ. ಅದರ ವರದಿಯನ್ನೂ ಕೊಟ್ಟಿದ್ದೇನೆ. ಅವರು ಯಾವುದೇ ತಕರಾರನ್ನು ತೆಗೆದಿಲ್ಲ. ಇವರು ಅರ್ಧ ಹಣವನ್ನು ತುಂಬಿದರೆ ಒಂದು ವಾರದಲ್ಲಿ ನಾವು ನೂರಕ್ಕೆ ನೂರು ತುಂಬುತ್ತೇವೆಂದು ಹೇಳಿದ್ದಾರೆ. ಇವರ ಹತ್ತಿರ ಹಣವಿಲ್ಲದಕ್ಕೆ ಇಲ್ಲವೆಂದು ಹೇಳುತ್ತಾರೆ. ತಾವು ಯಾವಾಗ 165 ಕೋಟಿರೂಪಾಯನ್ನು ತುಂಬುತ್ತೀರಿ ಹೇಳಿ? ಅವರು ನಮಗೆ ಇಲ್ಲಿ ಬರೆದುಕೊಟ್ಟಿದ್ದಾರೆ. ಅದರ ಬಗ್ಗೆ ನಿಖರವಾಗಿ ಹೇಳಿಬಿಡಿ. ಅವರು ಹಾರಿಕೆಯ ಉತ್ತರವನ್ನು ಹೇಳಿಬಿಟ್ಟರೆ ಹೇಗೆ?

ಅಧ್ಯಕ್ಷರು:– ಮಾನ್ಯ ಪಾಟೀಲರೇ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸಂಜೆಯೊಳಗೆ ಉತ್ತರವನ್ನು ಕೊಡುತ್ತಾರಲ್ಲಾ ಅದರಲ್ಲಿ ಹೇಳುತ್ತಾರೆ ಬಿಡಿ. ಅವರ ಉತ್ತರದಲ್ಲಿ ಹೇಳಿಸೋಣ ಬಿಡಿ.

ಶ್ರೀ ಎಸ್.ಎಸ್.ಪಾಟೀಲ್:– ಮೊನ್ನೆ ಬರಗಾಲದ ಬಗ್ಗೆ ಮಾತನಾಡುವಾಗ ಎಂದು ತುಂಬುತ್ತೀರೆಂದು ಕೇಳಿದ್ದಕ್ಕೆ ಉತ್ತರವನ್ನೇ ಹೇಳಲಿಲ್ಲ, ಏನನ್ನೂ ಹೇಳಲಿಲ್ಲ, ಈಗಲೂ ಹೇಳುವುದಿಲ್ಲ, ಸುಮ್ಮನೆ ಕಾನೂನನ್ನು ಹೇಳುತ್ತಾರೆ.

ಅಧ್ಯಕ್ಷರು:– ಇಂದು ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರಲ್ಲಾ ಆಗ ಹೇಳುತ್ತಾರೆ ಬಿಡಿ.

ಶ್ರೀ ಡಿ.ಬಿ.ಚಂದ್ರೇಗೌಡ:– ನಾಳೆ ಮುಖ್ಯಮಂತ್ರಿಯವರು ಉತ್ತರವನ್ನು ಹೇಳುವವರಿದ್ದಾರೆ, ಆಗ ಇದಕ್ಕೂ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು:– ಆಗ ಹೇಳುತ್ತಾರೆ ಬಿಡಿ. ಮಾನ್ಯ ಸಭಾಪತಿಯವರೆ ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

2) ವಿತ್ತೀಯ ಕಾರ್ಯಕಲಾಪಗಳು

2003-2004ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+**ಶ್ರೀ ಯು.ಆರ್.ಸಭಾಪತಿ (ಉಡುಪಿ):–** ಮಾನ್ಯ ಅಧ್ಯಕ್ಷರೆ, 2003-2004ರ ಮುಂಗಡ ಪತ್ರಗಳ ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭಿಸುತ್ತಿದ್ದೇವೆ. ನನ್ನದೊಂದು ಸಣ್ಣ ಸಲಹೆ ಇದೆ, ನಮ್ಮ ಎಲ್ಲಾ ವಿಷಯ ಸಮಿತಿಗಳ ವರದಿಯಲ್ಲಿ ಪ್ರತಿಯೊಬ್ಬರೂ, ಈ ವರದಿಗಳ ಅನುಷ್ಠಾನ ಪರಿಣಾಮಕಾರಿಯಾಗಿ ಆಗಬೇಕು, ಈ ವರದಿಗಳನ್ನು ಅನುಷ್ಠಾನಗೊಳಿಸುವುದರಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ, ಎನ್ನುವಂಥ ಮಾತನ್ನು ಕಂಡು ಕೊಂಡಿದ್ದೇವೆ. ಆದರೆ ಈ ವರದಿಗಳ ಬಗ್ಗೆ